ಸರಿಯಾಗಿ ಮಾಡಿ. ಸುಮ್ಮನೆ ಆರೋಪ ಮಾಡಬೇಡಿ" ಎಂದು ರಜನಿ ಗಡುಸಾಗಿಯೇ ಅಂದಳು.

ಅವಳ ಮಾತಿನಿಂದ ಸ್ವಲ್ಪ ವಿಚಲಿತನಾದ ಇನ್‌ಸ್ಪೆಕ್ಟರ್ ಅದನ್ನು ತೋರಿಸಿಕೊಳ್ಳದೇ ''ಬಾಕಿಯವರ ಸ್ಟೇಟ್‌ಮೆಂಟ್ ತಗೊಳ್ರೀ. ಹಾಂ, ಆ ವಿಶಾಲಾಕ್ಷಮ್ಮನ ಕರೀರಿ" ಎಂದ.

ಅವನ ಧ್ವನಿ ಗಡುಸಾಗಿತ್ತು.

ಇನ್‌ಸ್ಪೆಕ್ಟರ್‌ನ ಧ್ವನಿ ಕೇಳಿ ಹೆದರುತ್ತಲೇ ಬಂದಳು ವಿಶಾಲಾಕ್ಷಮ್ಮ.

"ಎಷ್ಟು ವರ್ಷದಿಂದ ಇಲ್ಲಿ ಇದ್ದೀಯಾ" ಈಗ ಅವನ ಧ್ವನಿ ಮತ್ತಷ್ಟು ಗಡುಸಾಗಿತ್ತು.

"ನಾನು ಇಲ್ಲಿಗೆ ಕೆಲಸಕ್ಕೆ ಬಂದು ಮೂರು ವರ್ಷ ಆಯಿತು ಸರ್. ನಾವು ಮಂಡ್ಯದವರು. ಒಂದು ಏಜೆನ್ಸಿಯವರು ತಂದು ಸೇರಿಸಿದ್ದರು. ಸೇರಿಕೊಂಡ ಆರು ತಿಂಗಳಿಗೆ ಸಾಹೇಬರು ಅವರನ್ನು ಕಟ್ ಮಾಡಿ ನನ್ನನ್ನು ಡೈರೆಕ್ಟ್ ಆಗಿ ಕೆಲಸಕ್ಕೆ ಇಟ್ಟುಕೊಂಡರು. ಆಗಿಂದ ಮನೆ ಕೆಲಸ, ಅಡುಗೆ ಎಲ್ಲಾ ನಾನೇ ನೋಡಿಕೊಳ್ಳುತ್ತಿದ್ದೆ. ಸಾಹೇಬರು ನನ್ನನ್ನು ಮನೆಯವರಂತೆಯೇ ನೋಡುತ್ತಿದ್ದರು. ನಿನ್ನೆ ರಾತ್ರಿ ಹಾಲು ಕುಡಿದು ಮಲಗಬೇಕಾದರೆ ತಿಂಡಿ ಬೇಗ ಆಗಲಿ ಎಂದು ಹೇಳಿದ್ದರು" ಎಂದು ಬಿಕ್ಕುತ್ತಾ ಹೇಳಿದಳು.

"ಸರಿ ಇವತ್ತು ಬೆಳಗ್ಗೆ ಏನೇನಾಯಿತು ಹೇಳು."

"ದಿನಾ ಐದೂವರೆಗೆ ಎದ್ದುಬಿಡುತ್ತಿದ್ದೆ. ಆರಕ್ಕೆ ಹಾಲು ಬರುತ್ತೆ. ಮೊದಲು ಹಾಲು ಕಾಯಿಸಿ ಸಾಹೇಬರಿಗೆ ಕಾಫಿ ಮಾಡಿಕೊಟ್ಟು ಮುಂದಿನ ಕೆಲಸ. ಆದರೆ ಇವತ್ತು ಯಾಕೊ ಸ್ವಲ್ಪ ಲೇಟ್ ಆಯಿತು. ಹಾಲಿನವನು ಕೂಗಿದ್ದಕ್ಕೆ ಎಚ್ಚರ ಆಯಿತು. ದಡಬಡನೆ ಹಾಲು ಹಾಕಿಸಿಕೊಂಡು ಕಾಫಿ ಮಾಡಿ ತಂದೆ. ಸಾಹೇಬರು ಬೆಡ್ ಮೇಲೆ ಇರಲಿಲ್ಲ. ಎಲ್ಲ ನೀಟ್ ಆಗಿ ಮಡಿಚಿಟ್ಟು ಹೋಗಿದ್ದರು. ಆ ರೂಂನಲ್ಲಿ ಇದ್ದಾರೆ ಅಂದುಕೊಂಡು ಒಳಬಂದೆ."

"ನೀನು ಬಂದಾಗ ಬೆಡ್‌ರೂಂ ಬಾಗಿಲು ತೆರೆದಿತ್ತಾ?'

"ಹೌದು ಸರ್ ಸಾಹೇಬರು ಬಾಗಿಲು ಹಾಕಿ ಮಲಗುತ್ತಿರಲಿಲ್ಲ. ಅವರು ಅಲ್ಲಿ ಇರಲಿಲ್ಲ. ಈ ರೂಂನಲ್ಲಿ ಇದ್ದಾರೇನೋ ಎಂದು ನೋಡಿದರೆ ಈ ರೂಂ ಲಾಕ್ ಆಗಿತ್ತು. ಅಕಸ್ಮಾತ್ ಒಳಗಡೆ ಬಂದು ಬಾಗಿಲು ಹಾಕಿದಾಗ ಲಾಕ್ ಆಗಿರಬೇಕೆಂದು ಅಡುಗೆ ಮನೆಯಿಂದ ಇನ್ನೊಂದು ಕೀ ತಂದು ತೆಗೆದು ಒಳಬಂದು ನೋಡಿದರೆ ಹೀಗಾಗಿದೆ'' ಈ ಬಾರಿ ಜೋರಾಗಿ ಅಳಲು ಪ್ರಾರಂಭಿಸಿದಳು.

ಅಷ್ಟರಲ್ಲಿ ಒಳಬಾಗಿಲಿನಿಂದ ಸುಮಾರು ಅರವತ್ತರ ಆಸುಪಾಸಿನ ವ್ಯಕ್ತಿ ಹಾಗೂ ಅವರ ಜೊತೆ ಒಬ್ಬ ಯುವಕ ಒಳಬಂದ. ವಿಶಾಲಾಕ್ಷಮ್ಮ ಅವರೆಡೆ ನೋಡಿ ಜಾಗ ಬಿಟ್ಟು ಪಕ್ಕಕ್ಕೆ ಸರಿದಳು.

"ಹಲೋ ಇನ್‌ಸ್ಪೆಕ್ಟರ್ ನಾನು ನಾಗಭೂಷಣ. ಈ ವಿಶ್ವನಾಥ ಅವರ ಲಾಯರ್. ಬೆಳಗ್ಗೆ ವಾಕಿಂಗ್ ಹೋಗಿದ್ದೆ, ಗೊತ್ತಾಗಲಿಲ್ಲ. ಈಗ ವಿಚಾರ ತಿಳಿದು ಓಡಿ ಬಂದೆ" ಅವರ ಮೈ ಮೇಲಿದ್ದ ಒದ್ದೆಯಾದ ಟಿ–ಷರ್ಟ್ ಹೆಗಲ ಮೇಲೆ ಇದ್ದ ಸಣ್ಣ ಟವಲ್ ಈಗತಾನೇ ವಾಕಿಂಗ್ ಮುಗಿಸಿ ಬಂದಿದ್ದಾರೆ ಅನ್ನುವಂತಿತ್ತು.

"ನೀವು ಬಂದಿದ್ದು ಒಳ್ಳೆಯದಾಯಿತು. ಇವರೇನು ವಿಚಿತ್ರ ವ್ಯಕ್ತಿನಾ? ಯಾರನ್ನೂ ಹತ್ತಿರ ಬಿಟ್ಟುಕೊಳ್ಳುತ್ತಿರಲಿಲ್ಲವಾ?"

ಮೆಟ್ಟಿಲೇರಿ ಬಂದಿದ್ದಕ್ಕೋ ಇಲ್ಲ, ವಯಸ್ಸಿನ ಕಾರಣದಿಂದಲೋ ಏದುಸಿರು ಬಿಡುತ್ತಲೇ,

"ನಿಜ ಸಾರ್ ನನ್ನ ಬಳಿ ಕೂಡಾ ಅಷ್ಟೆ; ಮಾತು ಕಡಿಮೆಯೇ. ಕೋಟ್ಯಂತರ ರೂಪಾಯಿಗಳ ಆಸ್ತಿ ಇದ್ದರೂ ಯಾವುದೇ ತಕರಾರು ಇಲ್ಲದೇ ವ್ಯವಹಾರ ನಡೆಸುತ್ತಿದ್ದರು."